mahindra Rise

# ಕಾರ್ಯ ಸ್ಥಳದಲ್ಲಿ ಲೈಂಗಿಕ ಕಿರುಕುಳದ ತಡೆಗಟ್ಟುವಿಕೆ



# ಶೂನ್ಯ ಸಹಿಷ್ಣುತೆ

mahindra Rise

**ಮಹೀಂದ್ರಾ & ಮಹೀಂದ್ರಾ ಲಿಮಿಟೆಡ್ ("ಕಂಪನಿ") ತನ್ನ ಎಲ್ಲಾ ಕಾರ್ಯ ಸ್ಥಳಗಳಲ್ಲಿ ಸುರಕ್ಷಿತವಾದ, ಪ್ರತಿಕೂಲವಲ್ಲದ ಮತ್ತು ಕಿರುಕುಳ ಮುಕ್ತ ಕೆಲಸದ ವಾತಾವರಣವನ್ನು ಒದಗಿಸುವಲ್ಲಿ ನಂಬಿಕೆಯಿಡುತ್ತದೆ. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ನಾವು ಶೂನ್ಯ ಸಹಿಷ್ಣುತೆ ವಿಧಾನವನ್ನು ಅನುಸರಿಸುತ್ತೇವೆ. ಲೈಂಗಿಕ ಕಿರುಕುಳವೆಂದರೆ ಅದು ಲೈಂಗಿಕ ಸ್ವಭಾವದ ಯಾವುದೇ ನೇರ ಅಥವಾ ಒಳಾರ್ಥವಿರುವ ಇಷ್ಟವಾಗದ ದೈಹಿಕ, ಮಾತಿನ ಅಥವಾ ಹಾವ ಭಾವದ ನಡವಳಿಕೆಯನ್ನು ಒಳಗೊಂಡಿರುತ್ತದೆ.**

## ಅನ್ವಯಿಸುವ ವಿಧಾನ :

ಈ ನೀತಿಯು ಕಂಪನಿ ಮತ್ತು ಅದರ ಅಂಗಸಂಸ್ಥೆಗಳಿಗೆ ಅನ್ವಯಿಸುತ್ತದೆ ಮತ್ತು ಅದರ ಯಾವುದೇ ಸ್ಥಳಗಳಲ್ಲಿ (ಕೆಲಸದ ಸ್ಥಳಗಳು) ಕಂಪನಿಗೆ ಸಂಬಂಧಿಸಿದ ಅಥವಾ ಭೇಟಿ ನೀಡುವ ಎಲ್ಲ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ. ಇದು ಲಿಂಗ-ಭೇದವಿಲ್ಲದ ನೀತಿಯಾಗಿದೆ ಮತ್ತು ಅವರ ಲೈಂಗಿಕ ದೃಷ್ಟಿಕೋನ ಅಥವಾ ಆದ್ಯತೆಗಳನ್ನು ಗಣನೆಗೆ ತಂದುಕೊಳ್ಳದೇ ಎಲ್ಲಾ ಉದ್ಯೋಗಿಗಳಿಗೆ ಅನ್ವಯಿಸುತ್ತದೆ.

## ದೂರುಗಳು :

- ಲೈಂಗಿಕ ಕಿರುಕುಳದ ಯಾವುದೇ ದೂರನ್ನು ತನಿಖೆ ಮಾಡಲಾಗುತ್ತದೆ ಮತ್ತು ಸಾಬೀತಾದರೆ ಅದನ್ನು ಗಂಭೀರವಾದ ದುರ್ನಡತೆ ಮತ್ತು ಕಂಪನಿಯ ನೀತಿ ಸಂಹಿತೆ ಮತ್ತು ಸೇವಾ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದು ಮತ್ತು ಸಂಬಂಧಪಟ್ಟ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮವನ್ನು ಪ್ರಾರಂಭಿಸಲಾಗುವುದು.

- ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ಅನುಭವಿಸುವ ಯಾವುದೇ ನೊಂದ ವ್ಯಕ್ತಿಯು ಆದಷ್ಟು ಬೇಗ ಆಯಾ ಆಂತರಿಕ ದೂರುಗಳ ಸಮಿತಿಯ (ICC) ಸದಸ್ಯರನ್ನು ಸಂಪರ್ಕಿಸಬೇಕು, ಅವರು ದೂರು ಸಲ್ಲಿಸುವ ಬಗ್ಗೆ ಮಾರ್ಗದರ್ಶನ ನೀಡುತ್ತಾರೆ ಮತ್ತು ದೂರು ವಿಲೇವಾರಿಯಾಗುವವರೆಗೆ ಎಲ್ಲಾ ಸಮಂಜಸವಾದ ಸಹಾಯವನ್ನು ನೀಡುತ್ತಾರೆ. ಕೊನೆಯ ಘಟನೆ ನಡೆದ ದಿನಾಂಕದಿಂದ 3 ತಿಂಗಳೊಳಗೆ ಆಯಾ ಐಸಿಸಿಗೆ ಲಿಖಿತವಾಗಿ ದೂರು ಸಲ್ಲಿಸಬೇಕು. ಯಾವುದೇ ಝೋನಲ್ ICC ಗೆ ಹೆಚ್ಚಿನ ಕೆಲಸದ ಹೊರೆ ಇದ್ದ ಸಂದರ್ಭಗಳಲ್ಲಿ, ಹೊಸ ದೂರನ್ನು ಮುಖ್ಯ ನೈತಿಕ ಅಧಿಕಾರಿಯು ಮತ್ತೊಂದು ವಲಯ ICC ಗೆ ಉಲ್ಲೇಖಿಸಬಹುದು ಅಥವಾ ವಿಚಾರಣೆ ನಡೆಸಲು ತಾತ್ಕಾಲಿಕವಾಗಿ ಮತ್ತೊಂದು ವಲಯ ICC ಯಿಂದ ಆ ICC ಗೆ ಸದಸ್ಯರನ್ನು ನಿಯೋಜಿಸಬಹುದು. ಪ್ರತಿಯೊಂದೂ ವಿಚಾರಣೆಯು 90 ದಿನಗಳಲ್ಲಿ ಪೂರ್ಣಗೊಳ್ಳುತ್ತದೆ.

## ಗೌಪ್ಯತೆ :

- ಯಾವುದೇ ದೂರಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಎಲ್ಲಾ ಸಂಭಾವ್ಯ ಕಾಳಜಿ, ಸೂಕ್ಷ್ಮತೆ ಮತ್ತು ವಿವೇಚನೆಯಿಂದ ಪರಿಗಣಿಸಬೇಕು ಮತ್ತು ಯಾವುದೇ ಪಕ್ಷ ಅಥವಾ ಸಾಕ್ಷಿಯನ್ನು ಗುರುತಿಸುವ ಯಾವುದೇ ಮಾಹಿತಿಯನ್ನು ಸಾರ್ವಜನಿಕರಿಗೆ, ಪತ್ರಿಕೆ ಅಥವಾ ಮಾಧ್ಯಮಗಳಿಗೆ ಯಾವುದೇ ರೀತಿಯಲ್ಲಿ ಪ್ರಕಟಿಸಲಾಗುವುದಿಲ್ಲ, ಸಂವಹನ ಮಾಡಲಾಗುವುದಿಲ್ಲ ಅಥವಾ ತಿಳಿಸಲಾಗುವುದಿಲ್ಲ.

## ರಕ್ಷಣೆ:

- ಸಂತ್ರಸ್ತರು/ದೂರುದಾರರು ಯಾವುದೇ ರೀತಿಯಲ್ಲಿ ಬೆದರಿಕೆಯನ್ನು ಅನುಭವಿಸಿದರೆ, ಪರಿಸ್ಥಿತಿಗೆ ಅಗತ್ಯವಿದ್ದರೆ ಕಂಪನಿಯು ದೂರುದಾರರಿಗೆ ರಕ್ಷಣೆ ನೀಡುತ್ತದೆ. ವಿಚಾರಣೆ ಬಾಕಿಯಿರುವಾಗ, ದೂರುದಾರರು ಮಧ್ಯಂತರ ಪರಿಹಾರಗಳಿಗಾಗಿ ಐಸಿಸಿಗೆ ಲಿಖಿತ ವಿನಂತಿಯನ್ನು ಸಲ್ಲಿಸಬಹುದು, ಇದನ್ನು ಐಸಿಸಿಯು ಕೇಸ್-ಟು-ಕೇಸ್ ಆಧಾರದ ಮೇಲೆ ಪರಿಗಣಿಸುತ್ತದೆ ಮತ್ತು ನಿರ್ಧರಿಸುತ್ತದೆ.

## ಸಂಧಾನದ ಮೂಲಕ ಇತ್ಯರ್ಥಗೊಳಿಸುವಿಕೆ :

- ದೂರುದಾರರು ವಿನಂತಿಸಿದರೆ, ವಿಚಾರಣೆಯನ್ನು ಪ್ರಾರಂಭಿಸುವ ಮೊದಲು, ಐಸಿಸಿಯು ಸಂಧಾನದ ಮೂಲಕ ವಿಷಯವನ್ನು ಇತ್ಯರ್ಥಪಡಿಸಬಹುದು, ಆದರೆ ಅಂತಹ ಸಂಧಾನದ ಮೂಲಕ ಯಾವುದೇ ಹಣಕಾಸಿನ ಇತ್ಯರ್ಥವನ್ನು ಮಾಡುವಂತಿಲ್ಲ.

**ಸುಳ್ಳು ಅಥವಾ ದುರುದ್ದೇಶಪೂರಿತ ದೂರುಗಳು:**

- ಸುಳ್ಳು ಅಥವಾ ದುರುದ್ದೇಶಪೂರಿತ ದೂರುಗಳನ್ನು ಸಲ್ಲಿಸುವ ಅಥವಾ ಯಾವುದೇ ನಕಲಿ ಅಥವಾ ತಪ್ಪುದಾರಿಗೆಳೆಯುವ ದಾಖಲೆಯನ್ನು ಸಲ್ಲಿಸುವ ಯಾವುದೇ ವ್ಯಕ್ತಿಯು ಅವರನ್ನುಸೇವೆಯಿಂದ ವಜಾಗೊಳಿಸುವುದನ್ನೂ ಒಳಗೊಂಡು ಆದರೆ ಅಷ್ಟಕ್ಕೇ ಸೀಮಿತವಾಗಿರದ ಸೂಕ್ತ ಕ್ರಮಕ್ಕೆ ಹೊಣೆಗಾರರಾಗುತ್ತಾರೆ.

**ಅರಿವು ಮತ್ತು ತರಬೇತಿ:**

- ಕಂಪನಿಯು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ ಮತ್ತು ಲೈಂಗಿಕ ಕಿರುಕುಳದ ಬಗ್ಗೆ ಎಲ್ಲಾ ಉದ್ಯೋಗಿಗಳಲ್ಲಿ ಜಾಗೃತಿಯನ್ನು ಮೂಡಿಸಲು ಸಂವಾದಕ್ಕಾಗಿ ವೇದಿಕೆಗಳನ್ನು ರಚಿಸುತ್ತದೆ. ಹೆಚ್ಚಿನ ವಿವರಗಳನ್ನು - ಈ POSH ನೀತಿಯ ಅಡಿಯಲ್ಲಿ ನೀಡಲಾದ ಮಾರ್ಗಸೂಚಿಗಳಲ್ಲಿ ಕಾಣಬಹುದು.

mahindra Rise